ಅ) ಹೌದು. ಖಾಸಗಿ ವಲಯದ ಬಂಡವಾಳ ಹೂಡಿಕೆಯಿಂದ ಅಭಿವೃದ್ಧಿಪಡಿಸಲು ಪೂರ್ವಭಾವಿ ಗುತ್ತಿಗೆಗಳನ್ನು ಆಹ್ವಾನಿಸಲಾಗಿದೆ.

ಇ) ಹೌದು.

ರಾಜ್ಯದಲ್ಲಿ ನಬಾರ್ಡ್ ಯೋಜನೆ ಕುರಿತು

1696 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97, 1997-98ನೇ ಸಾಲಿನಲ್ಲಿ ರಾಜ್ಯಕ್ಕೆ ಏಶಿಯನ್ ಡೆವಲಪ್ ಬ್ಯಾಂಕ್‌ನಿಂದ ಮಂಜೂರಾತಿಯಾದ ಹಣವೆಷ್ಟು, ಬಿಡುಗಡೆಯಾದ ಹಣವೆಷ್ಟು? (ಜಿಲ್ಲಾವಾರು ಕೆಲಸಗಳ ವಿವರ ಒದಗಿಸುವುದು)

ಆ) 1996-97, 1997-98ನೇ ಸಾಲಿನಲ್ಲಿ ರಾಜ್ಯಕ್ಕೆ ನಬಾರ್ಡ್‌ನಿಂದ ಮಂಜೂರಿಯಾಗಿರುವ ಹಣ ಎಷ್ಟು? ಹಾಗೂ ಬಿಡುಗಡೆಯಾಗಿರುವ ಹಣ ಎಷ್ಟು?

ಇ) ನಬಾರ್ಡ್‌ನಲ್ಲಿ ಮಂಜೂರಿಯಾಗಿರುವ ಕೆಲಸಗಳ ಜಿಲ್ಲಾವಾರು ವಿವರ ಒದಗಿಸುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಎಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.

ಆ) ನಬಾರ್ಡ್‌ನಿಂದ 1996-97ರಲ್ಲಿ 133.00 ಕೋಟಿ ರೂ. ಅಂದಾಜಿಗೆ ಮಂಜೂರಾತಿ ದೊರೆತಿದೆ. 1997-98ರಲ್ಲಿ ಈವರೆಗೆ 7.05 ಕೋಟಿ ರೂ. ಅಂದಾಜಿಗೆ ಮಂಜೂರಾತಿ ದೊರೆತಿದೆ. ಯಾವುದೇ ಹಣ ಬಿಡುಗಡೆಯಾಗಿಲ್ಲ.

ಇ) ಅನುಬಂಧದಲ್ಲಿ ಕೆಲಸಗಳ ಜಿಲ್ಲಾವಾರು ಮಂಜೂರಾತಿ ವಿವರ ನೀಡಿದೆ.

ದ. ಕನ್ನಡ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆ ಕುರಿತು.

1697 - ಶ್ರೀ ವಸಂತ ವಿ. ಸಾಲಿಯಾನ್ (ಕಾಪು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯನ್ವಯ ರಾಜ್ಯದಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗುವುದು?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ (ರಸ್ತೆ ಮತ್ತು ಸೇತುವೆಗಳನ್ನು ಪ್ರತ್ಯೇಕವಾಗಿ ತಿಳಿಸುವುದು)

ಇ) ಕಾಮಗಾರಿಗಳಿಗೆ ನಿಗದಿಗೊಳಿಸಿದ ಮೊತ್ತವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ನಬಾರ್ಡ್‌ನಿಂದ ರಾಜ್ಯದಲ್ಲಿ 245 ಕಾಮಗಾರಿಗಳು ಒಪ್ಪಿತವಾಗಿದೆ. ಈ ಸಾಲಿನಲ್ಲಿ ಇದುವರೆಗೆ 11 ಸೇತುವೆ ಕಾಮಗಾರಿಗಳು ಮಾತ್ರ ಒಪ್ಪಿತವಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1 ರಸ್ತೆ ಮತ್ತು 10 ಸೇತುವೆ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿಲಾಗಿದೆ.

ರಸ್ತೆ	1
ಸೇತುವೆ	10

ಇ) ಮೇಲಿನ 11 ಕಾಮಗಾರಿಗಳಿಗೆ 506.70 ಲಕ್ಷ ರೂ. ನಿಗದಿಪಡಿಸಲಾಗಿದೆ.

ದ. ಕನ್ನಡ ಜಿಲ್ಲೆಯ ರಸ್ತೆಗಳ ದುರಸ್ತಿ

1698 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳು ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಅದನ್ನು ಸರಿಪಡಿಸಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ. ರಸ್ತೆ ಸರಿಪಡಿಸಲು, ಮಳೆಹಾನಿ ದುರಸ್ತಿ ಅನುದಾನದಲ್ಲಿ264.55 ಲಕ್ಷ ರೂ. ಬಿಡುಗಡೆ ಮಾಡಿದೆ. ಇದಲ್ಲದೆ ವಾರ್ಷಿಕ ದುರಸ್ತಿ : ನಿರ್ವಹಣೆಗೆ ಒಟ್ಟು361.20 ಲಕ್ಷ ರೂ. ಬಿಡುಗಡೆ ಮಾಡಿದೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕ್ರಿಕೆಟ್ ಕ್ರೀಡಾಂಗಣ

1699 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕ್ರಿಕೆಟ್ ಕ್ರೀಡಾಂಗಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು? ಹಾಗೂ ಸರ್ಕಾರವು ಕೊಡುವ ಅನುದಾನವೆಷ್ಟು?*

2. *ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಅಥವಾ ಸಿಂಡರ್ ಟ್ರಾಕ್ ಎಷ್ಟು ಸಮಯದ ಒಳಗೆ ಹಾಕಲಾಗುವುದು? ಹಾಗೂ ಮಂಗಳೂರು ಕ್ರೀಡಾಂಗಣದ ಸರ್ವತೋಮುಖ ಅಭಿವೃದ್ಧಿ ಮಾಡಲು ತಗಲುವ ವೆಚ್ಚ ಎಷ್ಟು? ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?*